ಶ್ರೀ ಮುಲ್ಕ ಗೋವಿಂದರೆಡ್ಡಿ.— ರಾಣಿ ಕೆರೆಯ ಹಿಂದೆ ಎಷ್ಟು ಅಚ್ಚುಕಟ್ಟಿದೆ ?

Sri KADIDAL MANJAPPA.— I have no information readily.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಲ್ಲಿರತಕ್ಕ ಜಮೀನಿಗೆಲ್ಲಾ ಈ ಕೆರೆಯಿಂದ ಬರುವ ನೀರು ಸಾಕಾಗುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಗುತ್ತದೆಂದು ವರದಿ ಬಂದಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಪ್ರತಿವರ್ಷವೂ ಈ ಕೆರೆ ತುಂಬುತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಕೆರೆಗೆ ಒಂದು ಫೀಡರ್ ಚಾನಲ್ ಹಾಕಿಕೊಡಬೇಕೆಂದು ಈ ಕೆರೆಯ ಅಚ್ಚುಕಟ್ಟುದಾರರು ಕೇಳುತ್ತಿದ್ದಾರೆಯೇ ?

Sri KADIDAL MANJAPPA.— I don't remember if any representations have been made to me.

ಶ್ರೀ ಮುಲ್ಕ ಗೋವಿಂದರೆಡ್ಡಿ.— ಎಸ್ಟಿಮೇಟ್ ಆಗಿರುವುದು ತಮಗೆ ಜ್ಞಾಪಕದಲ್ಲಿಲ್ಲವೇ ?

Sri KADIDAL MANJAPPA.— I do not remember.

Grant of land in Survey Nos. 271 and 272 of Hebbasur Village, Chamarajanagar Taluk.

Q.—102. Sri B. RACHIAH (Yelandur—Scheduled Castes).—

Will the Government be pleased to state :—

(*a*) the total extent of land in Survey Nos. 271 and 272 of Hebbasur Village, Chandakavadi Hobli, Chamarajanagar Taluk ;

(*b*) how many people have been sanctioned land in those survey numbers ;

(*c*) how many times the records have been built up in favour of the Dodadahalli people of the same hobli and of the same taluk ?

A.—Sri KADIDAL MANJAPPA (Minister for Revenue and Public Works.—

(*a*) Survey No. 271. Extent 527 acres and 18 guntas.

Survey No. 272. Extent 335 acres and 18 guntas.

(*b*) Sixty-eight persons have been granted land in Survey No. 271 and 29 persons in Survey No. 272.

(*c*) Records in favour of Dodadahalli people are reported to have been built up once in 1949-50.

ಶ್ರೀ ಬಿ. ರಾಚಯ್ಯ.—271 ಮತ್ತು 272ನೆಯ ಸರ್ವೆ ನಂಬರುಗಳು ಸರ್ಕಾರಿ ಬಂಜರುಗಳಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬೇಕು.

ಶ್ರೀ ಬಿ. ರಾಚಯ್ಯ.—ಇದರಲ್ಲಿ 60 ಮಂದಿಗಳಿಗೂ, 29 ಮಂದಿಗಳಿಗೂ ಜಮೀನುಗಳನ್ನು ಮಂಜೂರು ಮಾಡಲಾಗಿದೆಯೆಂದು ಇಲ್ಲಿ ಹೇಳಿದ್ದೀರಿ. ಈ ಜಮೀನುಗಳನ್ನು ಅಲ್ಲೇ ಸುತ್ತಮುತ್ತಲ ಗ್ರಾಮದವರಿಗೇ ಕೊಟ್ಟಿದ್ದೀರಾ ಅಥವಾ ಬೇರೆಯವರಿಗೆ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ದೊಡದಹಳ್ಳಿ, ಅರಳೀಪುರ, ಚಂದಕವಾಡಿ, ಹೆಬ್ಬಸೂರು ಮುಂತಾದ ಗ್ರಾಮಗಳವರಿಗೆ ಕೊಟ್ಟಿದೆ.

ಶ್ರೀ ಬಿ. ರಾಚಯ್ಯ.—ಇದರಲ್ಲಿ ಹರಾಜಿನಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದೀರಿ, ಅಪ್ಸೆಟ್ ಬೆಲೆಗೆ ಎಷ್ಟು ಜನಕ್ಕೆ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಬಿ. ರಾಚಯ್ಯ.— ಗ್ರೋ ಮೋರ್ ಫುಡ್ ಪ್ರಕಾರ ಜಮೀನು ಕೊಟ್ಟಿರುವವರೆಲ್ಲರೂ ಸಾಗುವಳಿ ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.— ಮಾಡಿರಬೇಕು, ನಿರ್ಧರವಾಗಿ ಹೇಳಲಾರೆ.

ಶ್ರೀ ಬಿ. ರಾಚಯ್ಯ.— ಸಾಗುವಳಿ ಮಾಡದಿರುವವರ ವಿಷಯದಲ್ಲಿ ಅವರ ಸಾಗುವಳಿ ಚೀಟಿಯನ್ನು ವಜಾ ಮಾಡಬೇಕೆಂದು ರಿಪೋರ್ಟು ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ರಿಪೋರ್ಟು ಬಂದಿಲ್ಲ.

ಶ್ರೀ ಬಿ. ರಾಚಯ್ಯ.— ದೊಡದಹಳ್ಳಿ ಗ್ರಾಮದ ಜನರ ಸಂಬಂಧದಲ್ಲಿ ಒಂದು ಸಾರಿ ರಿಕಾರ್ಡುಗಳನ್ನು ಸಿದ್ಧಪಡಿಸಲಾಗಿದೆಯೆಂದು ಇಲ್ಲಿ ಹೇಳಿದ್ದೀರಿ. ಮೂರು ಸಾರಿ ಹಾಗೆ ಸಿದ್ಧಪಡಿಸಲಾಯಿತೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಒಂದುಸಾರಿ ಮಾಡಿದ್ದಾರೆಂದು ರಿಪೋರ್ಟು ಬಂದಿದೆ.

ಶ್ರೀ ಬಿ. ರಾಚಯ್ಯ.—ಅಲ್ಲಿ ಅರ್ಜಿಹಾಕಿಕೊಂಡಿರುವವರಲ್ಲಿ ಎಲ್ಲಾ ಕೋವಿನವರೂ ಇದ್ದಾರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಬಿ. ರಾಚಯ್ಯ.—ಒಡಜನರ ವಿಷಯದಲ್ಲಿ ಅವರು ಯಾವ ಕೋವಿನವರೇ ಆಗಲಿ ಕೊಡಬೇಕೆಂದು ಆರ್ಡರ್ ಮಾಡುತ್ತೀರಾ ?

Sri KADIDAL MANJAPPA.—Yes. If land is available.

Arrangements to Restore and Construct Tanks.

Q.—655. Sri C. M. ANNAYYAPPA (Gubbi).—

Will the Government be pleased to state :—

(*a*) the number of tanks in the State in respect of which survey work

(Sri C. M. ANNAYYAPPA.)

has been conducted by the Public Works Department since 1947-48 with the object of restoring or constructing them (talukwar details to be given) ;

(*b*) the amount required by the Department of Public Works for this work (talukwar details to be given) ;

(*c*) the plan chalked out by the Government in the matter of restoration of these tanks and the construction of new tanks ;

(*d*) whether the Department of Public Works has carried on works according to the plan of the Government ;

(*e*) how long since the Public Works Department prepared estimates for the restoration of the tanks of Idagur, Avverahalli, Chennashettihalli, Ellapura, Bychenahalli and Neralakatte of Gubbi Taluk, and the tank of Nelligere of Mayasandra Hobli, Thuruvekere Taluk ; when sanction was accorded for these ;

(*f*) the number of tanks in respect of which work is being done at present ; the period it may take to complete them ?

A.—Sri KADIDAL MANJAPPA (Minister for Revenue and Public Works).—

(*a*) About 1,000 tanks since 1947-48. Talukwar details are not available readily. Districtwar details are noted below :—

1.	Kolar	200
2.	Tumkur	98
3.	Mysore	21
4.	Chitaldrug	19
5.	Hassan	125
6.	Chikmagalur ..	400
7.	Mandya	50
8.	Shimoga	180

(*b*) No separate establishment for the preparation of the projects is maintained in this respect. The existing staff does the normal survey work.

(*c*) About 170 tanks every year on the average.

(*d*) Yes.

(*e*) 1. *Idagur.*—In 1945-46. Estimate sanctioned in 1951 for Rs. 18,000.

2. *Avverahalli.*—In 1947-48. Estimate sanctioned in 1950 for Rs. 16,800.

3. *Chennasettihalli.*—No estimate is prepared and sanctioned.

4. *Ellapur tank.*—In 1951. Estimate for Rs. 30,000 not sanctioned. Work is deferred as the cost is prohibitive.

5. *Byachenahalli tank.*—In 1951. Estimate for Rs. 24,000 not sanctioned. Work deferred.

6. *Neralkatte.*—An estimate for Rs. 22,000 is got up but not sanctioned. Work deferred as it is prohibitively costly.

7. *Malligere.*—The name must be Malligere and not Nelligere. An estimate is got up for Rs. 69,000. It is under further examination.

(*f*) Items 1 and 2 under (*e*) are being done.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—1947-48ರಲ್ಲಿ ಈ ಕೆರೆಗಳನ್ನು ಸರ್ವೆಮಾಡಿ, ಎಸ್ಟಿಮೇಟ್ ಮಾಡಿದೆಯೆಂದು ಹೇಳಿದ್ದೀರಿ. ಎಸ್ಟಿಮೇಟು ಮಂಜೂರಾಗ ಬೇಕಾದರೆ ಹೀಗೆ ಐದು ವರ್ಷಗಳು ಬೇಕೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲೀನೋ ತಪ್ಪು ಬಿದ್ದಿರಬೇಕು.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಇದಗೂರು ಕೆರೆಯ ಅಂದಾಜು 18,000 ರೂಪಾಯಿಗಳೆಂದು ಹೇಳಿದ್ದೀರಿ. 23 000 ರೂಪಾಯಿಗಳಿಗೆ ಅಂದಾಜಾಗಿ ಎಸ್ಟಿಮೇಟು ಮಂಜೂರಾತಿಗೆ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿಲ್ಲ.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಎಲ್ಲಾಪುರ, ಬೈಚೇನ ಹಳ್ಳಿ, ನೇರಳೆಕಟ್ಟೆ—ಈ ಕೆರೆಗಳಿಗೆ ಅಂದಾಜು ಪಟ್ಟಿಯು ಬಹಳ ದುಬಾರಿ ಎಂಬ ದೆಸೆಯಿಂದ ನಿಲ್ಲಿಸಿದೆಯೆಂದು ಹೇಳಿದ್ದೀರಿ. ಈ ಅಂದಾಜು ಮಾಡಿರುವುದು ಹಾಲಿ ಇರತಕ್ಕ ದರಗಳ ಪ್ರಕಾರವೇ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ದರದ ಪ್ರಕಾರವೋ ಹೇಳಲಾರೆ ; ಅಂತೂ ದುಬಾರಿಯೆಂದು ನಿಲ್ಲಿಸಿದೆ.

ಶ್ರೀ ಸಿ. ಎಂ. ಆಣ್ಣಯ್ಯಪ್ಪ.—ಇಲ್ಲಿ ತೋರಿಸಿರುವ ಅಂದಾಜಿನ ವೆಚ್ಚಕ್ಕೂ ಕಡಮೆ ದರದಲ್ಲಿ ಈ ಕೆಲಸ ಆಗುತ್ತದೆಂದು ತಮ್ಮ ಗಮನಕ್ಕೆ ಬಂದರೆ ಮಾಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ನಮ್ಮ ಗಮನಕ್ಕೆ ಬಂದರೆ ವಿಮರ್ಶೆ ಮಾಡಿಸುತ್ತೇವೆ.

ಶ್ರೀ ಸಿ. ಎಂ. ಆಣ್ಣಯ್ಯಪ್ಪ.—ಇದು ಕ್ಷಾಮಪೀಡಿತ ಪ್ರದೇಶದಲ್ಲಿ ಸೇರಿರುವುದರಿಂದ ಇಲ್ಲಿ ಅರ್ಧಭಾಗದ ಮಟ್ಟಿಕೆಲಸವನ್ನೆಲ್ಲಾ ರೈತರೇ ಮಾಡಿಕೊಡಲು ತಯಾರಾಗಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಮಾಡಿ Remunerative ಆಗಿ ಕಂಡುಬಂದರೆ ಪುನಃ ಆಲೋಚನೆ ಮಾಡೋಣ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ರೆವೈಸ್ಡ್ ಎಸ್ಟಿಮೇಟ್ ತಯಾರಾಗಿದ್ದರೆ, ಪುನಃ ಕಡಮೆ ದರದಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುವುದಕ್ಕೆ ಸಾಧ್ಯವೆಂದು ಸಲಹೆ ಬಂದರೆ ಪುನಃ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ಜಿಲ್ಲೆಯಲ್ಲಿ 98 ಕೆರೆಗಳ ಸರ್ವೆ ಮಾತ್ರ ಆಗಿದೆ, ಇನ್ನೂ ಮುಕ್ಕಾಲುಭಾಗ ಕೆರೆಗಳು ಸರ್ವೆ ಆಗದೇ ನಿಂತಿರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಸರ್ವೆ ಮಾಡಿರ ತಕ್ಕ ಕೆರೆಗಳ ಕೆಲಸವಾದರೇ ಸಾಕೆಂದು ಕಾಣುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಸರ್ವೆ ಮಾಡಿರತಕ್ಕ ಕೆರೆಗಳ ಕೆಲಸವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲವನ್ನೂ ಇಲ್ಲ, ಕೆಲವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎಷ್ಟನ್ನು ತೆಗೆದುಕೊಂಡಿದೆ ?

Sri KADIDAL MANJAPPA.—I can give you from the year 1949-50....

Mr. SPEAKER.—There is answer (*c*). About 170 tanks every year on the average.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರ್ವೆ ಮಾಡುವುದು ಆಯಾ ಜಿಲ್ಲೆಯಲ್ಲಿ ಕೆಲಸ ಮಾಡುವವರನ್ನವಲಂಬಿಸಿರುತ್ತದಲ್ಲವೆ ?

Mr. SPEAKER.—That is understood. Any other question ?

ಶ್ರೀ ಬಿ. ವಿ. ನಾರಾಯಣರೆಡ್ಡಿ.—'Talukwar details are not available' ಎಂದು ಉತ್ತರ ಕೊಡಲಾಗಿದೆ, ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಡಿಸ್ಟ್ರಿಕ್ಟ್ ಆಫೀಸಿನಲ್ಲಿದ್ದ ವಿವರಗಳನ್ನು ಕೊಡಲಾಗಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಬರೀ 200 ಕೆರೆ, 98 ಕೆರೆ ಎಂದಿರುತ್ತದೆಯೋ ಅಥವಾ ಕೆರೆಗಳ ಹೆಸರುಗಳೂ ಇರುತ್ತವೆಯೊ ?

ಶ್ರೀ ಕಡಿದಾಳ್ ಮಂಜಪ್ಪ.—ಹೆಸರುಗಳು ಅಲ್ಲಿರುವುದಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗಿದ್ದರೆ ಕೆರೆಗಳನ್ನು ನೋಡಿ ಇಂಥಿಂಥ ಕೆರೆಗಳನ್ನು ಸರ್ವೆ ಮಾಡಿದ್ದೇವೆಂದು ಕೊಡದೆ ಸುಮ್ಮನೆ ವ್ಯಾಪಿನಿಂದ ನೋಡಿ ಕೊಡುತ್ತಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥಿಂಥ ಡಿಸ್ಟ್ರಿಕ್ಟ್ ನಲ್ಲಿ ಇಷ್ಟಿಷ್ಟೆಂದು ವರದಿ ಬಂದಿದೆ, ಇನ್ನೂ ಹೆಚ್ಚು ವಿವರಗಳು ಬೇಕಾದರೆ, ತರಿಸಿಕೊಡಬೇಕಾಗುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—200 ಕೆರೆ ಎಂದರೆ, ಅವನ್ನು ಪರೀಕ್ಷೆಮಾಡಿತಾನೆ ಕೊಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಅದೆಲ್ಲಾ ವಿವರ ಗಳಿರುತ್ತವೆ, ನಮ್ಮಲ್ಲಿರುವುದನ್ನು ಇಲ್ಲಿ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ಪ್ರಶ್ನೆ ತಮಗೆ ಬಂದು ಒಂದೂವರೆ ತಿಂಗಳ ಮೇಲಾಗಲಿಲ್ಲವೆ ?

Mr. SPEAKER.—It is understood. Question No. 660 by Sri Panchakshariah. (Some Members rose to put supplementary questions on the previous questions).

At this rate, every question will take half an hour and every member will like to put supplementaries. Moreover, this question pertains to Tumkur District.

Repairing tanks and providing drinking water wells in Hassan District.

Q.—660. Sri K. PANCHAKSHARAIAH (Arsikere).—

Will the Government be pleased to state:—

(*a*) the amount provided for repairing tanks in Hassan District during 1951-52 and 1952-53;

(*b*) the amount provided for drinking water wells;

(*c*) whether such provision of funds has been separately shown in respect of major and minor tanks;

(*d*) of this, the amount allotted to Arsikere Taluk ?

A.—Sri KADIDAL MANJAPPA (Minister for Revenue and Public Works).—

(*a*)

	1951-52	1952-53
	Rs.	Rs.
Restoration of minor tanks.	1,10,000	95,000
Repairs to tanks ..	12,000	27,000

(*b*) 1951-52 Rs. 80,000.
1952-53 Rs. 19,000.

(*c*) Yes.